# ಸುವರ್ಣ ಸಂಭ್ರಮ, ಅಭಿಮಾನದ ಹೊಳೆ



### ‘ಸುಧಾ’ ನನಗೂ ಸಂಭ್ರಮ

ಆರಂಭದಿಂದಲೂ ಪತ್ರಿಕೆಯ ಓದುಗನಾದ ನನಗೂ ಅಷ್ಟೇ ಸಂಭ್ರಮ. ಆರಂಭದಲ್ಲಿ ನಮ್ಮ ಕುಟುಂಬದ, ನಾವು ಮೂವರು ಸರದಿಯಂತೆ ವಾರಕ್ಕೊಬ್ಬರು ಪತ್ರಿಕೆ ಖರೀದಿಸಿ ಪೈಪೋಟಿಯಿಂದ ಓದುತ್ತಿದ್ದೆವು. ಕಾಲ ಕಾಲಕ್ಕೆ ಓದುಗರ ಆಸಕ್ತಿಗೆ ತಕ್ಕಂತೆ ‘ಸುಧಾ’ ಬದಲಾವಣೆ ಹೊಂದಿದ್ದಲ್ಲದೆ, ಅಷ್ಟೇ ಜನಪ್ರಿಯತೆ ಉಳಿಸಿಕೊಂಡಿರುವುದು ಇದರ ಹೆಗ್ಗಳಿಕೆ.

-ಪಿ.ಎ. ಸುಧೀಂದ್ರ, ಬೆಂಗಳೂರು

### 70ರ ದಶಕದ ‘ಸುಧಾ’ ಇದೆ

ಯಾವ ಸೌಲಭ್ಯವೂ ಇಲ್ಲದ ನಮ್ಮ ಪುಟ್ಟ ಹಳ್ಳಿಗೆ 70ರ ದಶಕದಲ್ಲಿ ನಮ್ಮ ತಂದೆ ಅಂಚೆಯಲ್ಲಿ ಪತ್ರಿಕೆ ತರಿಸುತ್ತಿದ್ದರು. ‘ಅಮೃತ ಕಲಶವ ಹೊತ್ತ ಸುಂದರಿ’ಯ ಮುಖಪುಟ ಹೊತ್ತ 70ರ ದಶಕದ ‘ಸುಧಾ’ ಇನ್ನೂ ನನ್ನ ಸಂಗ್ರಹದಲ್ಲಿದೆ.

-ಶೀಲಾ ಸತ್ಯೇಂದ್ರಸ್ವಾಮಿ ಹರವೆಮಠ

### ಚಿರಯೌವ್ವನೆ

ಐವತ್ತರ ಸಂಭ್ರಮಕ್ಕೆ ಕಾಲಿಟ್ಟ ‘ಸುಧಾ’ ನೀನು ನಿಜವಾಗಿಯೂ ಚಿರಯೌವ್ವನೆ, ಜತೆಗೆ ಚಿರಂಜೀವಿ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ಗುರುವಾರ ಕೈಸೇರದಿದ್ದರೆ ಚಡಪಡಿಕೆ

ನಾನು ತಿಂಗಳಿಗೆ ನೂರು ರೂಪಾಯಿ ಸಂಪಾದನೆ ಮಾಡುತ್ತಿದ್ದ ಕಾಲದಲ್ಲೇ ಆರಂಭವಾದ ‘ಸುಧಾ’ಕ್ಕೆ ವಾರಕ್ಕೆ 40 ಪೈಸೆ ಖರ್ಚು ಮಾಡಿಕೊಳ್ಳುತ್ತಿದ್ದೆ. ಅದರಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳನ್ನು ಓದಿ ಗೆಳೆಯರೊಂದಿಗೆ ಗಂಭೀರ ಚರ್ಚೆ ನಡೆಸುತ್ತಿದ್ದೆ. ಬೆಳಗಾವಿಯ ಕುಗ್ರಾಮವೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ಪ್ರತಿವಾರ ‘ಸುಧಾ’ ಸಿಗುತ್ತಿರಲಿಲ್ಲ. ಆಗ ತಿಂಗಳಿಗೊಮ್ಮೆ ಎಲ್ಲ ಸಂಚಿಕೆಗಳನ್ನು ಸಂಗ್ರಹಿಸಿ ಓದಿ ಬಿಡುತ್ತಿದ್ದೆ.

ಇತ್ತೀಚಿನ ದಿನಗಳಲ್ಲಿ ಮಸಾಲೆ ಲೇಖನಗಳು ಹೆಚ್ಚಿವೆ. ಆದರೂ ಗುರುವಾರ ‘ಸುಧಾ’ ಕೈಗೆ ಸೇರದಿದ್ದರೆ ಚಡಪಡಿಕೆ ಆರಂಭವಾಗುತ್ತದೆ.

-ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಸುವರ್ಣ ಸಂಚಿಕೆ ಬೇಕು

ಎಷ್ಟೆಲ್ಲಾ ವಾರಪತ್ರಿಕೆಗಳು ಬಂದು ಹೋಗಿವೆ. ಆದರೆ ‘ಸುಧಾ’ಳ ವರ್ಚಸ್ಸು ಮಾತ್ರ ಒಂದಿಷ್ಟೂ ಕಳೆಗುಂದಿಲ್ಲ.

‘ಸುಧಾ’ಳಷ್ಟು ನನ್ನನ್ನು ಬೇರೆ ಯಾವ ಪತ್ರಿಕೆಯೂ ಸೆಳೆದಿಲ್ಲ. 25 ತುಂಬಿದಾಗ ಬೆಳ್ಳಿ ಸಂಚಿಕೆ ತಂದ ನೆನಪು ನನ್ನಲ್ಲಿ ಇನ್ನೂ ಹಸಿಯಾಗಿದೆ. 50ನೆ ಸುವರ್ಣ ಸಂಚಿಕೆ ಇನ್ನೂ ಯಾಕೆ ತಂದಿಲ್ಲ?

ಸಿ. ಮಂಜುನಾಥ್ ನೆಟ್ಕಲ್, ಬೆಂಗಳೂರು

### ಅಭಿಮಾನದ ಹೊಳೆ

ಸುವರ್ಣ ಸಂಭ್ರಮ ಆಚರಿಸುತ್ತಿರುವ ‘ಸುಧಾ’ ಎಲ್ಲರಿಗೂ ಅಚ್ಚುಮೆಚ್ಚಿನ ಅಭಿಮಾನದ ಪತ್ರಿಕೆಯಾಗಿ ರೂಪುಗೊಂಡಿದೆ. ಲಕ್ಷಾಂತರ ಓದುಗರನ್ನು ಹೊಂದಿರುವ ಸುಧಾ ಇನ್ನೂ ಎತ್ತರಕ್ಕೆ ಬೆಳೆಯಲಿ.

ಮಹೇಶ್ವರಪ್ಪ, ಚಿತ್ರದುರ್ಗ, ಸುಂದರ್ ಬೆಂಗಳೂರು, ಕೆ. ಶ್ರೀನಿವಾಸರಾವ್, ಹರಪನಹಳ್ಳಿ, ಕೋಟೇಶ್ವರ ಸೂರ್ಯನಾರಾಯಣರಾವ್, ಅಚ್ಚು ಹುಂಚ, ರವೀಂದ್ರ ನಾಯಕ್, ಪರ್ಕಳ, ಲಕ್ಷ್ಮೀನರಸಿಂಹ, ಚಾಮರಾಜನಗರ, ಅಂಬಿಕಾ ಆರ್, ಬೆಂಗಳೂರು, ಕೆ.ಎಂ. ಮಧ್ವರಾಯ, ಬೆಂಗಳೂರು, ವೈ.ಎನ್. ಸುಂದರೇಶ್, ಮೈಸೂರು, ವೈ.ಜಿ. ನರಸಿಂಹನ್, ಶಿವಮೊಗ್ಗ, ಎಚ್.ಆರ್ ದೇಸಾಯಿ, ರಾಯಚೂರು, ಟಿ.ಆರ್. ಲಲಿತರಾವ್ ಬೆಂಗಳೂರು, ಕೊ.ಸು. ನರಸಿಂಹಮೂರ್ತಿ, ಚಾಮರಾಜಪುರ, ವಿಜಯ ಬೆಂಗಳೂರು, ಶ್ರೀನಾಥ್ ಕೊನೇಟಿ, ಮಲ್ಲಿಕಾರ್ಜುನ ಗಚ್ಚಿ, ಗೋಗಿ.

ಸುಧಾ ಸುವರ್ಣ ಸಂಭ್ರಮ ಮೆಚ್ಚಿ ಇನ್ನೂ ಹಲವಾರು ಓದುಗರು ಪತ್ರ ಬರೆದಿದ್ದಾರೆ.

(ಸಂ)

### ಸಂತಸ ತಂದ ಸಂಗತಿ

‘ಸುಧಾ’ ಜ.16ರ ಮುಖಪುಟ ಲೇಖನ ಪ್ರವೀಣ ಕುಲಕರ್ಣಿಯವರ ‘ಐ.ಟಿ.ಕಣಿವೆಯಲ್ಲಿ ಕನ್ನಡ ಕಲರವ’ ಓದಿ ಸಂತಸವಾಯಿತು.

-ಸು.ವಿಜಯಲಕ್ಷ್ಮಿ, ವೈ.ಜಿ.ನರಸಿಂಹನ್, ಶಿವಮೊಗ್ಗ ಹೇಮಾ ಸುಬ್ರಹ್ಮಣ್ಯ, ಕೋಣಂದೂರು/ ಕೆ.ಪ್ರಕಾಶ್, ಚಿಕ್ಕಜೋಗಿಹಳ್ಳಿ/ ಪ್ರೊ.ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ರೂಪಾ ರಾವ್, ಧಾರವಾಡ




### ನಾಡಿ(ಸೋಜ) ಮಿಡಿತ!

ಪ್ರಕಾಶ ಕುಗ್ವೆಯವರು ಮಡಿಕೇರಿ ಸಾಹಿತ್ಯ ಸಮ್ಮೇಳನಾಧ್ಯಕ್ಷ ನಾ.ಡಿಸೋಜರ ಕುರಿತು ಬರೆದಿರುವ ‘ಕನ್ನಡದ ನಾಡಿ ಮಿಡಿತ’ ಲೇಖನ ಸೊಗಸಾಗಿ ಮೂಡಿಬಂದಿದೆ.

ಅಮೃತಾ, ಕುಂದಾಪುರ/ ಎಚ್.ಆನಂದಕುಮಾರ್, ಚಿತ್ರದುರ್ಗ/ ರುದ್ರೇಶ್ ಬಿ.ಅದರಂಗಿ, ಬೆಂಗಳೂರು

### ರಾಮ್ ಉತ್ತರ ಸ್ವಾರಸ್ಯಕರ

ರಾಮ್ ಅವರ ಉತ್ತರಗಳು ಚುಟುಕಾಗಿದ್ದರೂ, ಸ್ವಾರಸ್ಯಕರವಾಗಿರುತ್ತವೆ. ಜ. 16ರ ಸಂಚಿಕೆಯಲ್ಲಿನ 4.8 ಮತ್ತು 10ನೇ ಪ್ರಶ್ನೆಗಳಿಗೆ ಅವರು ನೀಡಿರುವ ಉತ್ತರಗಳನ್ನು ನೋಡಿ ನಗು ತಡೆಯಲಾಗಲಿಲ್ಲ.

-ಹಾಡ್ಯ ಬ. ಜಯಾನಂದ, ಮೈಸೂರು

### ನಕ್ಕು ನಲಿಸಿದ ಬರಹ

ಸುಮಾ ರಮೇಶ್‌ರ ಹಾಸ್ಯ ಲೇಖನ ‘ಫ್ರೀ ಸಾಂಬಾರು ಪುಡಿ’ ಮನೆ ಮಂದಿಯನ್ನೆಲ್ಲಾ ನಕ್ಕು ನಗಿಸುವಲ್ಲಿ ಯಶಸ್ವಿಯಾಯಿತು.

-ದಿವಾಕರ್ ಪಿ., ಸಕಲೇಶಪುರ

### ಮಾಹಿತಿ ನೀಡಿದ ಕಥೆ

ವಿವೇಕಾನಂದ ಕಾಮತರ ಕಥೆ ‘ಕನಸುಗಳು ಮರಳಲಿ’ ಸಕಾಲಿಕ. ಇದರಲ್ಲಿ ಭಾರತೀಯ ದಂಡಸಂಹಿತೆ 228(ಎ) ವಿಧಿಯ ಬಗ್ಗೆ ವಿವರಗಳಿವೆ. ಇದು ಎಷ್ಟೋ ಜನರಿಗೆ ತಿಳಿದಿರುವುದಿಲ್ಲ.

-ಸಿ.ಎಸ್. ಗೋಪಾಲಕೃಷ್ಣ, ಮೈಸೂರು/ರಾಜಶೇಖರ ಹಾದಿಮನಿ, ಧಾರವಾಡ

### ಜಾನಪದ ಕಥೆ

‘ಎಳೆಯರ ಅಂಗಳ’ ವಿಭಾಗದಲ್ಲಿ ‘ಗಂಧರ್ವ ಸೇನನ ಸಾವು’ ಮಕ್ಕಳ ಜಾನಪದ ಕಥೆ ಹಾಸ್ಯಭರಿತವಾಗಿತ್ತು, ಉತ್ತಮವಾಗಿತ್ತು.

-ವಾಣಿಶ್ರೀ. ಬಿ., ಬೂಡುಜಾಲು

### ಕೃತಿಚೌರ್ಯ ಅಲ್ಲ

ಜ. 9ರ ಸಮುದ್ರ ಮಥನ ವಿಭಾಗದಲ್ಲಿನ ‘ಕೃತಿಚೌರ್ಯ’ ಎಂಬ ಪತ್ರದ ಬಗ್ಗೆ ಪ್ರತಿಕ್ರಿಯೆ: ಭಾರತೀ ಕಾಸರಗೋಡು ಅವರ ‘ಆತ್ಮಕಥನ’ದಲ್ಲಿನ ಅನೇಕ ವಿಚಾರಗಳನ್ನು ಪೂಜ್ಯ ದೊರೆಸ್ವಾಮಿ ಅಯ್ಯಂಗಾರ್ ಹೇಳಿರುವುದು ನನ್ನ ನೆನಪಿನಲ್ಲೂ ಇದೆ. 1978,1981,1988ನೇ ವರ್ಷಗಳಲ್ಲಿ ನಮ್ಮ ಮನೆಯಲ್ಲೇ ಅವರ ಕಚೇರಿಗಳನ್ನು ಏರ್ಪಡಿಸಿದ್ದೆವು. ಆಗ ಹಲವಾರು ಪ್ರಸಂಗಗಳನ್ನು ಆಡು ಮಾತಿನಲ್ಲೇ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಈ ಧ್ವನಿ ಸುರುಳಿಗಳು ಇಂಗ್ಲೆಂಡ್‌ನಲ್ಲಿರುವ ನನ್ನ ತಮ್ಮ ಡಾ. ವಿ. ಹರಿಪ್ರಸಾದ್ ಅವರ ಸಂಗೀತ ಭಂಡಾರದಲ್ಲಿವೆ. ಇವುಗಳನ್ನು ‘ವಿಪಂಚೀ ವೈಭವ’ದಲ್ಲಿ ಬಳಸಿಕೊಂಡಿದ್ದೇನೆ. ‘ಆತ್ಮ ಕಥನ’ದ ಆರಂಭದಲ್ಲಿ ಗುರುಗಳ ಆದೇಶದಂತೆ ಲೇಖಕಿ ನನ್ನನ್ನು ಸಂಪರ್ಕಿಸಿದ್ದು ನೆನಪುಂಟು. ಇಬ್ಬರ ಬರವಣಿಗೆಗೂ ಏಕೈಕ ವೈಣಿಕರೇ ಆಧಾರವಾಗಿರುವುದರಿಂದ ಭಾಷೆ ಹಾಗೂ ಸಂಗತಿಗಳಲ್ಲಿ ಸಾಮರಸ್ಯ ಕಂಡುಬರುವುದು ಸಹಜ. ಈ ವಿಚಾರಕ್ಕೆ ಪೂಜ್ಯ ಶಾರದಮ್ಮ ದೊರೆಸ್ವಾಮಿ ಅಯ್ಯಂಗಾರರು ಸಾಕ್ಷಿಯಾಗಿದ್ದಾರೆ.

-ವಿ. ಅಮೃತ, ಬೆಂಗಳೂರು